

# ವೃತ್ತಿಯ ಆವಿಷ್ಕಾರದಲ್ಲಿ ತೊಡಗಿದ್ದೇನೆ

**ಶೈನಿ ಪರೇರಾ**
**ಉದಯದ 'ಸುಂದರಿ'ಯ ನಮ್ರತಾ**

**◆ ನಟನೆಯನ್ನು ಹೇಗೆ ಆರಂಭಿಸಿದಿರಿ?**

ನನಗೆ ಅಭಿನಯದ ಬಗ್ಗೆ ಒಲವು ಇರಲಿಲ್ಲ. ಮೂರು ವರ್ಷದ ಹಿಂದೆಯಷ್ಟೇ ನಟನೆ ಮಾಡುವ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡೆ. ಅದಕ್ಕಿಂತ ಪೂರ್ವದಲ್ಲಿ ಆ ಬಗ್ಗೆ ಸ್ಪಷ್ಟ ನಿಲುವೂ ಇರಲಿಲ್ಲ. 2018ರಲ್ಲಿ ಸರಿಗಮಪ ಸಂಬಂಧ ಬೆಂಗಳೂರಿಗೆ ಬಂದಿದ್ದೆ. ಆ ಸಂದರ್ಭದಲ್ಲೇ ನನಗೆ ನಟನೆಯ ಪ್ರಯತ್ನ ಮಾಡೋಣ ಎನ್ನುವ ಯೋಚನೆಯನ್ನು ಹುಟ್ಟುಹಾಕಿತು. ಹಾಗೆಂದು ಅವಕಾಶಗಳೇನು ನನ್ನನ್ನು ಹುಡುಕಿ ಬರಲಿಲ್ಲ. ಒಂದು ವರ್ಷ ಪೂರಾ ರೂಮಿನಲ್ಲೇ ಇದ್ದು ನನ್ನ ಪಯತ್ನ ನಾನು ಮಾಡಿದೆ. ಆಡಿಷನ್‌ಗಳನ್ನು ನಿರಂತರ ನೀಡುತ್ತಿದ್ದೆ. ಅದನ್ನು ಬಿಟ್ಟು ಬೇರೆ ಯಾವ ಕೆಲಸವೂ ಇರಲಿಲ್ಲ. ಆ ನಂತರ 'ಲೈಮ್‌ಲೈಟ್' ಎನ್ನುವ ಸಂಸ್ಥೆಯಲ್ಲಿ ಒಂದು ತಿಂಗಳ ಅವಧಿಯ ನಟನೆಗೆಯ ಕ್ರಾಶ್ ಕೋರ್ಸ್ ಮಾಡಿದೆ. ಅದೇ ಸಮಯಕ್ಕೆ 'ಮೂರು ಗಂಟು' ಎನ್ನುವ ಧಾರಾವಾಹಿಯಲ್ಲಿ ಅವಕಾಶ ಸಿಕ್ಕಿತು. ನಂತರ 'ಆಕಾಶದೀಪ' ಅದರಲ್ಲಿ ನೆಗೆಟಿವ್ ರೂಲ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ.

**◆ ಮಂಗಳೂರಿನಿಂದ ಬೆಂಗಳೂರಿಗೆ ಬಂದ ಹೊಸತರಲ್ಲಿ ಹೇಗೆನಿಸಿತು?**

ಸರಿಗಮಪಕ್ಕಾಗಿ ಬೆಂಗಳೂರಿಗೆ ಬಂದೆ. ಬೆಂಗಳೂರು ಚೆನ್ನಾಗಿದೆ ಅನ್ನಿಸಿತು. ಖುಷಿ ಆಗಿದ್ದರಿಂದ ಇಲ್ಲೇ ಉಳಿದುಕೊಂಡೆ. ಆರಂಭದಲ್ಲಿ ನನ್ನ ಸ್ನೇಹಿತರು ಸಹಾಯ ಮಾಡಿದರು. ಅವರೇ ನನಗೆ ಬೆಂಗಳೂರಿನಲ್ಲಿ ಬಂಧು ಬಳಗ ಆಗಿದ್ದರು.

**◆ ಸುಂದರಿಯ ನಿಮ್ಮ ಪಾತ್ರದ ಬಗ್ಗೆ ಹೇಳುವುದಾದರೆ...**

ನಮ್ರತಾ ತುಂಬ ಒಳ್ಳೆಯ ಮನಸ್ಸಿರುವ ಹುಡುಗಿ. ದುಷ್ಟತನ ಎನ್ನುವುದು ಎಳ್ಳಷ್ಟು ಆಕೆಗೆ ಗೊತ್ತಿಲ್ಲ. ಅನ್ಯರ ಬಗ್ಗೆ ಕಾಳಜಿಯನ್ನು ಆಕೆ ಸಹಜವಾಗಿ ತೋರಿಸುತ್ತಾಳೆ. ತನ್ನ ವೈಯಕ್ತಿಕ ಬಯಕೆಗಳಿಗಿಂತ ಬೇರೆಯವರ ಬೇಕು ಬೇಡಗಳಿಗೆ ಆದ್ಯತೆ ನೀಡುವ ವಿಶೇಷ ವ್ಯಕ್ತಿತ್ವ ಆಕೆಯದು. ಮೂಲತಃ ಅನಾಥ ಬದುಕನ್ನು ಅನುಭವಿಸಿದ್ದಾಳೆ. ಕುಟುಂಬ– ಸಂಬಂಧಗಳ ಮಹತ್ವವನ್ನು ಚೆನ್ನಾಗಿ ಬಲ್ಲವಳಾಗಿದ್ದಾಳೆ. ಅವಳಿಗೆ ಅವರ ಪಾಲಕರು ಒಳ್ಳೆಯ ಮೌಲ್ಯವನ್ನು ಕಲಿಸಿ ಬೆಳೆಸಿದ್ದಾರೆ. ಜೀವನದಲ್ಲಿ ಎದುರಾಗುವ ಎಂತಹ ಕಷ್ಟಗಳನ್ನೂ ಎದುರಿಸುವ ಶಕ್ತಿ ಆಕೆಗೆ ಇದೆ.

**◆ ಕ್ರೌರ್ಯದ ಮಾತ್ರ ಮುಗ್ಧತೆಯ ಪಾತ್ರ ನಿರ್ವಹಿಸುವಾಗ ನಿಮ್ಮ ಮೇಲೆ ಎಂತಹ ಪರಿಣಾಮ ಬೀರಬಹುದು.**

'ಆಕಾಶದೀಪ'ದಲ್ಲಿ ಈ ಪಾತ್ರಕ್ಕಿಂತ ವಿರುದ್ಧ ನಲೆಯ ಪಾತ್ರವನ್ನೇ ಮಾಡುತ್ತಿದ್ದೇನೆ. ಅದು ಇನ್ನೂ ಪ್ರಸಾರ ಆಗಿಲ್ಲ ಅಷ್ಟೆ. ನಮ್ರತಾಳ ಪಾತ್ರಕ್ಕೆ ಗುಲಗಂಜಿಯಷ್ಟು ಹೋಲಿಕೆ ಆಗದಷ್ಟು ವೈರುಧ್ಯದ ಪಾತ್ರ ಅದು. ಪಾತ್ರ ಎಂಬುದು ನೆಗೆಟಿವ್ ಇರಲಿ ಪಾಸಿಟಿವ್ ಇರಲಿ ನನ್ನನ್ನು ಅದು ವೈಯಕ್ತಿಕವಾಗಿ ಪ್ರಭಾವಿಸುವುದಿಲ್ಲ. ಅದನ್ನು ನಾನು ಮನಸಿಗೆ ತೆಗೆದುಕೊಳ್ಳುವುದೇ ಇಲ್ಲ. ಪಾತ್ರವಾಗಿ ಮಾತ್ರ ನೋಡುತ್ತೇನೆ ನಟಿಸುತ್ತೇನೆ. ಬಣ್ಣ ತೆಗೆದ ನಂತರ ವೈಯಕ್ತಿಕವಾಗಿ ನಾನು ನಾನಾಗಿಯೇ ಉಳಿಯುತ್ತೇನೆ. ಮೇಕಪ್ ಮಾಡಿದ ನಂತರವೇ ಪಾತ್ರದ ಪರಕಾಯ ಪ್ರವೇಶ ಮಾಡುತ್ತೇನೆ. ನನಗೆ ಪಾತ್ರಗಳ ಗುಣ ಅವಗುಣಗಳು ಮುಖ್ಯ ಆಗುವುದಿಲ್ಲ. ಅದು ಪಾಸಿಟಿವ್ ಇರಬಹುದು ಇಲ್ಲವೇ ನೆಗೆಟಿವ್ ಇರಬಹುದು. ಕಥೆ ಬಯಸಿದಂತೆ ಅಭಿನಯವನ್ನು ನಿರ್ವಹಿಸಬೇಕಾಗುತ್ತದೆ. ನಟಿಯಾದವರಿಗೆ ಅದೇ ಮುಖ್ಯ.

**◆ ಹತ್ತಾರು ಅವಕಾಶಗಳು ಇದ್ದಾಗ ಯಾವುದೋ ಒಂದು ಪಾತ್ರವನ್ನು ಏಕೆ ಆಯ್ಕೆ ಮಾಡಿಕೊಳ್ಳುತ್ತೀರಿ?**

ಅದು ಸಿನಿಮಾ ಇರಲಿ ಧಾರಾವಾಹಿ ಇರಲಿ ಕಥೆಯಲ್ಲಿ ಪಾತ್ರ ಏನಾಗಿದೆ ಮುಂದೆ ಏನಾಗುತ್ತದೆ ಎನ್ನುವುದನ್ನು ಗಮನಿಸುತ್ತೇನೆ. ಪಾತ್ರ ಯಾವುದೇ ಆಗಿರಬಹುದು. ಕಥೆಯ ಬೆನ್ನೆಲುಬು ಆ ಪಾತ್ರ ಆಗಿರಬೇಕು. ಆ ಪಾತ್ರವೇ ಕಥೆಯ ನಿರೂಪಣೆಯ ಕೇಂದ್ರ ಆಗಿರಬೇಕು. ಅದರ ಪ್ರಾಮುಖ್ಯತೆಯನ್ನು ಗಮನಿಸುತ್ತೇನೆ. ಪಾತ್ರ ಗ್ಲಾಮರಸ್ ಇರಬಹುದು ಇನ್ನೇನೋ ಆಗಿರಲೂಬಹುದು. ನನಗೆ ಪಾತ್ರಕ್ಕೆ ನ್ಯಾಯ ಸಿಕ್ಕಿದೆ ಎನ್ನುವುದು ಮನವರಿಕೆ ಆಗಬೇಕು. ಇದಕ್ಕಾಗಿ ಬೇರೆಯವರ ಜೊತೆ ಚರ್ಚಿಸಿ ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ. ನನಗೆ ಸರಿ ಅನಿಸಿದರೆ ಮಾತ್ರ ಅದನ್ನು ತೆಗೆದುಕೊಳ್ಳುತ್ತೇನೆ. ಏಕೆಂದರೆ ಒಂದು ಪಾತ್ರದ ಬಗ್ಗೆ ನನ್ನ ಅಭಿಪ್ರಾಯ ಬೇರೆಯವರ ಅಭಿಪ್ರಾಯಕ್ಕಿಂತ ಭಿನ್ನ ಇರಬಹುದು. ನನ್ನ ಇಷ್ಟ ಬೇರೆಯವರಿಗೆ ಸರಿಕಾಣದೇ ಇರಬಹುದು. ಈ ಕಾರಣಕ್ಕೆ ಪಾತ್ರವನ್ನು ಸ್ವತಃ ನಾನೇ ಆಯ್ಕೆ ಮಾಡಿಕೊಳ್ಳುತ್ತೇನೆ.

**◆ ಸಂಗೀತ– ನಟನೆ ಇದರಲ್ಲಿ ನಿಮ್ಮ ಆಯ್ಕೆ?**

ಇವೆರಡರಲ್ಲಿ ಇದೇ ನನ್ನ ಮಾರ್ಗ ಎಂದು ಇನ್ನೂ ಇರ್ದಿಷ್ಟವಾಗಿ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಗಾಯಕಿ ಆಗಬೇಕು ಎನ್ನುವ ಆಸೆ ಇತ್ತು. ಅದಕ್ಕಾಗಿಯೇ ನಾನು ಸರಿಗಮಪ ಸ್ಪರ್ಧೆಗೆ ಬಂದಿದ್ದೆ. ಆದರೆ ಸಂಗೀತ ಎನ್ನುವುದು ದೊಡ್ಡ ತಪಸ್ಸು. ಅದರಲ್ಲಿ ನನಗೆ ಹೆಚ್ಚು ಅವಕಾಶಗಳು ಸಿಗಲಿಲ್ಲ. ಇನ್ನೂ ಹೆಚ್ಚಿನ ತಾಲೀಮನ್ನು ನಾನು ಮಾಡಬೇಕು. ಮಾತ್ರವಲ್ಲ ಅದಕ್ಕೆ ನನ್ನನ್ನು ನಾನು ಅರ್ಪಿಸಿಕೊಳ್ಳಬೇಕಾಗುತ್ತದೆ. ಅದನ್ನೂ ಮಾಡುವ ಆಸೆ ಇದೆ. ನಾನು ಏನೂ ಮಾಡಬೇಕು ಎನ್ನುವ ಹುಡುಕಾಟವನ್ನು ನಡೆಸಿದ್ದೇನೆ. ಅದರ ಜೊತೆ ನಟನೆಯನ್ನು ಮಾಡುತ್ತಿದ್ದೇನೆ. ಮುಂದೆ ಏನು ಮಾಡುತ್ತೇನೆ ಎನ್ನುವುದು ಗೊತ್ತಿಲ್ಲ. ನನ್ನ ವೃತ್ತಿಯ ಬದುಕು ಯಾವುದು ಎಂದು ಇನ್ನೂ ಆವಿಷ್ಕರಿಸಬೇಕು. ನನ್ನ ಆಸಕ್ತಿಯ ಕ್ಷೇತ್ರದಲ್ಲಿಯೇ ಕೆಲಸ ಮಾಡುತ್ತೇನೆ.

**■ ರಾಘವೇಂದ್ರ ಕೆ.**